

ಹೊಯ್ಸಳರ ಶಿಲ್ಪಕಲೆ ಎಂದೊಡನೆ ನೆನಪಾಗುವುದೇ ಬೇಲೂರು–ಹಳೇಬೀಡು. ಆದರೆ ಹೆಚ್ಚು ಪ್ರಚಾರ ಪಡೆಯದ ಅಂಥದೇ ಶಿಲ್ಪಕಲೆಯ ಬೀಡು ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಅರಳುಗುಪ್ಪೆ.

ಇದು ಅತೀ ಪ್ರಾಚೀನವಾದ ಗ್ರಾಮ, ಪ್ರಾಗೈತಿಹಾಸದ ತಾಣವಾಗಿತ್ತೆಂದು ವಿದ್ವಾಂಸರ ಅಭಿಪ್ರಾಯವಾಗಿತ್ತು. ಪುಟ್ಟ ಗ್ರಾಮವಾದ ಅರಳುಗುಪ್ಪೆ ತನ್ನ ಮಡಿಲಲ್ಲಿ ಭವ್ಯವಾದ ದೇವಾಲಯವನ್ನೇ ಅಡಗಿಸಿಕೊಂಡಿದೆ. ಹೊಯ್ಸಳರ ಕಾಲದಲ್ಲಿ ವಿಷಕನ್ಯೆಯ ಬಳಕೆ ಇತ್ತೆಂಬುದನ್ನು ಈ ದೇವಾಲಯ ಉಲ್ಲೇಖಿಸುತ್ತಿದ್ದು, ಇದು ಬಹಳಷ್ಟು ಕುತೂಹಲ ಕೆರಳಿಸುವ ಅಂಶ.

ಈ ದೇವಾಲಯ 13ನೇಯ ಶತಮಾನದಲ್ಲಿ ಹೊಯ್ಸಳ ಅರಸ ವೀರ ಸೋಮೇಶ್ವರನಿಂದ ನಿರ್ಮಾಣವಾಯಿತು. ನಾಲ್ಕಡಿ ಎತ್ತರದ ನಕ್ಷತ್ರಾಕಾರದ ಜಗುಲಿಯ ಮೇಲೆ ನಿರ್ಮಾಣಗೊಂಡಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಸುಕನಾಸಿ, ನವರಂಗಗಳಿಂದ ಕೂಡಿದ ಏಕ ಕೂಟ ದೇವಾಲಯವಿದು. ದೇವಾಲಯದ ಗೋಡೆಯ ಕೆಳಭಾಗವು ಆರು ಚಿತ್ರಪಟ್ಟಿಕೆಗಳಿಂದ ಅಲಂಕೃತ ಗೊಂಡಿದೆ. ಗೋಡೆಯ ಮಧ್ಯಭಾಗವು ಶ್ರೀದೇವಿ ಭೂದೇವಿಯಿಂದ ಕೂಡಿದ ವಿಷ್ಣುವಿನ 24 ರೂಪಗಳಿಂದ ಅಲಂಕೃತಗೊಂಡಿದೆ. ಪ್ರತಿ ಶಿಲ್ಪಕ್ಕೂ ಪ್ರತ್ಯೇಕ ಲತಾ ತೋರಣ ಹಾಗೂ ಪುಟಾಣಿ ಗೋಪುರಗಳಿವೆ. ಈ ಶಿಲ್ಪಗಳ ಪೀಠಭಾಗದಲ್ಲಿ ಶಿಲ್ಪಿ 'ಹೊನ್ನೊಜನ' ನಾಮಾಂಕಿತವಿದೆ. ಗರ್ಭಗುಡಿಯ ಮೇಲೆ ನಾಲ್ಕಂತಸ್ತಿನ ಅಲಂಕೃತ ಶಿಖರವಿದೆ.

ದೇಗುಲದ ಬಲ ಪಾರ್ಶ್ವದಲ್ಲಿ ಸುಂದರ ಸ್ತ್ರೀ ವಿಗ್ರಹವೊಂದು ಮಸಿ ಮೆತ್ತಿಕೊಂಡು ಆಕರ್ಷಕವಾಗಿದೆ. ಇದೇ ವಿಷಕನ್ಯೆಯ ಶಿಲ್ಪ. ಇದರ ಕಾಲಿನ ಬಳಿ ಪುಟ್ಟ ಕೋತಿಯೊಂದು ಸೆರಗು ಹಿಡಿದುಕೊಂಡು ನಿಂತಿದೆ.

ಹೊಯ್ಸಳ ಶಿಲ್ಪಕಲೆಯಂತೆ ಈ ದೇವಾಲಯದಲ್ಲೂ ರಾಮಾಯಾಣ–ಭಾಗವತ ಕಥೆಗಳು ಪೂರ್ಣಗೊಂಡಿಲ್ಲ. ರಾಮಾಯಣವು ಸುಂದರ ಕಾಂಡಕ್ಕೆ ನಿಂತಿದೆ. ಪುತ್ರಕಾಮೇಷ್ಟಿ ಯಾಗ, ರಾಮ ಗುಹ ಸಂವಾದ, ರಾಮ ಗಂಗಾನದಿ ದಾಟುವ ದೃಶ್ಯ ಅತ್ಯಂತ ಮನೋಹರವಾಗಿ ಮೂಡಿಬಂದಿದೆ. ಇಲ್ಲಿಂದ ಮುಂದೆ ಭಾಗವತ ಕತೆ ಪ್ರಾರಂಭವಾಗುತ್ತದೆ. ಕೃಷ್ಣನ ಬಾಲಲೀಲೆ ತುಂಬಾ ಅದ್ಭುತವಾಗಿದೆ. ರಾಸಲೀಲೆಗೆ ಭಾಗವತ ನಿಂತು ಹೋಗಿದೆ. ಇದು ಪೂರ್ವದ ಗೋಡೆಯಲ್ಲಿದೆ. ಯಕ್ಷ, ಯಕ್ಷಿ, ಲಕ್ಷ್ಮಿ, ನೃತ್ಯ ಗಣೇಶ, ಮೋಹಿನಿ, ಷಡ್ಭುಜ ಸರಸ್ವತಿ, ವೇಣುಗೋಪಾಲ, ಕೃಷ್ಣ, ಲಕ್ಷ್ಮೀನರಸಿಂಹ, ಉಗ್ರ ನರಸಿಂಹ, ಯೋಗಾನರಸಿಂಹ ಇತ್ಯಾದಿ ವಿಗ್ರಹಗಳು ಬಹು ಸುಂದರವಾಗಿವೆ. ಭುವನೇಶ್ವರದಲ್ಲಿ ಶಿವತಾಂಡವ ವಿಗ್ರಹವಿದೆ. ಶಿವ ತನ್ನ ಹಿಂದಿನ ಕೈಗಳೆರಡರಲ್ಲಿ ತ್ರಿಶೂಲ ಹಿಡಿದಿದ್ದಾನೆ. ಮುಂದಿನ ಎರಡು ಕೈಗಳಲ್ಲಿ ಬಲಭಾಗದಲ್ಲಿ ಅಭಯಹಸ್ತ, ಎಡಭಾಗದಲ್ಲಿ ಗಜದಂಡ ಹಸ್ತ ತಾಂಡವ ಮೂರ್ತಿಯ ಮುಖಮುದ್ರೆ ಗಂಭೀರವಾಗಿದೆ. ಸುತ್ತಲೂ ವಾದ್ಯಗಾರರ ವಿಗ್ರಹವಿದೆ. ಉಮಾ ಮಹೇಶ್ವರನ ಮೂರ್ತಿಯೂ ಪ್ರಾಚೀನವಾದುದು. ಲಲಿತಾಸನದಲ್ಲಿರುವ ದ್ವಿಭುಜ ಶಿವನ ಪಕ್ಕದಲ್ಲಿ ಉಮೆ ಕುಳಿತಿದ್ದಾಳೆ. ಶಿವನ ಬಲಗೈ ಉಪದೇಶ ಮುದ್ರೆಯಲ್ಲಿದ್ದರೆ, ಎಡಗೈ ದೇವಿಯನ್ನು ಆಲಂಗಿಸಿದೆ. ಈ ವಿಗ್ರಹ ಅಜಂತಾ ಶೈಲಿಯಲ್ಲಿದ್ದು, ರಾಷ್ಟ್ರ ಕೂಟರ ಕಾಲದ್ದಿರಬೇಕೆಂದು ಇತಿಹಾಸಕಾರರು ಅಭಿಪ್ರಾಯ ಪಟ್ಟಿದ್ದಾರೆ.

ದೇವಾಲಯದ ಒಳಭಾಗದಲ್ಲಿ ನವರಂಗದ ಕಂಬಗಳು ಹೊಯ್ಸಳ ವಾಸ್ತು ರೀತಿಯಲ್ಲಿದ್ದು ಶಿಲ್ಪಗಳಿಂದಲೇ ಅಲಂಕೃತಗೊಂಡಿದೆ. ಗರ್ಭಗೃಹದಲ್ಲಿ ಆರು ಅಡಿ ಎತ್ತರದ ಶ್ರೀ ಕೇಶವ ವಿಗ್ರಹವಿದೆ. ದ್ವಾರದಲ್ಲಿ ಜಾಲಂಧ್ರ, ದ್ವಾರಪಾಲಕರು, ನಾರಾಯಣ ಮತ್ತು ಶಿಖರಗಳ ಶಿಲ್ಪಗಳಿವೆ. ತೋರಣದಲ್ಲಿ ವಿಷ್ಣುವಿನ ದಶಾವತಾರಗಳಿವೆ.

ಅರಳುಗುಪ್ಪೆಯ ವಿಶೇಷವೆಂದರೆ ವಿಷಕನ್ಯೆಯ ಶಿಲ್ಪ, ಷಡ್ಭುಜ ಸರಸ್ವತಿ, ರಾಷ್ಟ್ರಕೂಟರ ಕಾಲದ ಉಮಾ ಮಹೇಶ್ವರನ ವಿಗ್ರಹಗಳು.

## ಹೋಗುವುದು ಹೇಗೆ?

ಬೆಂಗಳೂರಿನಿಂದ ರೈಲು, ಬಸ್ಸಿನ ಸೌಲಭ್ಯವಿದೆ. ಶಿವಮೊಗ್ಗ– ಬೆಂಗಳೂರು ಪ್ಯಾಸೆಂಜರ್ ಬೆಂಗಳೂರನ್ನು ಬೆಳಗಿನ 6 ಗಂಟೆಗೆ ಬಿಟ್ಟು ಅರಳು ಗುಪ್ಪೆಗೆ 9 ಗಂಟೆಗೆ ಬರುತ್ತದೆ. ಸಂಜೆ 5–30ಕ್ಕೆ ಅದೇ ಪ್ಯಾಸೆಂಜರ್ ಶಿವಮೊಗ್ಗದಿಂದ (ಬೆಂಗಳೂರಿಗೆ ಕಡೆಗೆ) ಹೊರಟು ಅರಳುಗುಪ್ಪೆಗೆ ಬರುತ್ತದೆ.